ಶ್ರೀ ಎನ್. ಪುಟ್ಟಮಾಸ್ತಿಗೌಡ.—ಈಗಾಗಲೇ ನಮ್ಮ ಶಾಸ್ತ್ರಿಗಳು ಮಟ್ಟದಲ್ಲಿ ಒಂದು ಕಮಿಟಿ ಮಾಡಿ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಪುನರ್ವಸತಿ ಆ ಕಮಿಟಿ ಸೇರಿ ಎಲ್ಲೆಲ್ಲಿ ಅತಿ ಅವಶ್ಯಕವಾಗಿ ಪದಾರ್ಥಗಳಿಗೆ ತೊಂದರೆಯಾಗುತ್ತಿದೆಯೆಂಬ ಬಗ್ಗೆ ಅಂಕಿಅಂಶಗಳನ್ನು ತೆಗೆಸಿಕೊಂಡು ಅವುಗಳನ್ನು ನಂತರ ವಿತರಣೆಮಾಡಬೇಕೆಂದು ಸೂಚನೆ ಕೊಡಲಾಗಿದೆ ಅದನ್ನು ಅವರು ನೋಡಿಕೊಳ್ಳುತ್ತಿದ್ದಾರೆ. ವಿಧಾನಸೌಧದಲ್ಲಿಯೂ ಈಗಾಗಲೇ ಒಂದು ಕಂಟ್ರೋಲ್ ರೂಂ ಮಾಡಿ ೪ ಗಂಟೆಗಳವರೆಗೆ ಪೋಲೀಸ್ ಅಧಿಕಾರಿಗಳು ಇದ್ದು ಎಲ್ಲೆಲ್ಲಿ ಏನೇನು ನಡೆಯುತ್ತಿದೆಯೆಂಬುದನ್ನು ತಿಳಿದು ತಕ್ಷಣ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದೆ. ಆಹಾರ ಧಾನ್ಯಗಳು ಮತ್ತು ಉಳಿದ ಅಸಶ್ಯಕವೆಸ್ತುಗಳನ್ನು ಜನರಿಗೆ ಒದಗಿಸಲು ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಸಂದರ್ಭ ಒದಗಿದಾಗಲೆಲ್ಲಾ ಅವಶ್ಯಕವಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡು ಜನರಿಗೆ ಅನಾನುಕೂಲವಾಗದಂತೆ ತಪ್ಪಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ನಾನು ತಿಳಿಸಲಿಚ್ಛಿಸುತ್ತೇನೆ.

(ii) re : Lathicharge on Railway Workers at Mysore City

2-30 P.M.

ಶ್ರೀ ಬಿ. ವಿ. ಕಕ್ಕಯ್ಯ —ಮಾನ್ಯ ಅಧ್ಯಕ್ಷರೇ, ನಾನು ನೆನ್ನೆಯ ದಿವಸ ಮೈಸೂರಿನಲ್ಲಿ ರೈಲ್ವೆ ನೌಕರರ ಮೇಲೆ ಪೋಲೀಸಿನವರು ಲಾಠಿಚಾರ್ಜ್ ಮಾಡಿದ್ದರ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅಧ್ಯಕ್ಷರು ಅದನ್ನು ಗಮನಸೆಳೆಯೂವ ಸೂಚನೆಯಾಗಿ ಪರಿವರ್ತಿಸಿದ್ದಾರೆ. ಅದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕು ಮತ್ತು ಅದರ ಬಗ್ಗೆ ಇಲ್ಲಿ ಚರ್ಚೆ ನಡೆಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥನೆ.

SRI N. HUTCHMASTHY GOWDA (Minister for Revenue) —Madam Speaker, In view of the tense situation in the workshop area and workers quarters in Mysore City and frequent meetings held by the Union leaders to incite the workers, prohibitory order under Section 144 Cr. P. C was promulgated by the Sub-Divisional Magistrate, Mysore, on the evening of 5th May 1974. Wide publicity was given to this prohibitory order which was brought into force within a radius of one mile from the workshop. On the morning of 6th May 1974, the workers assembled inside the workshop at about 0700 hours and held a meeting in which Union Leader Anthoni Das and others spoke inciting and instigating the workers. Just before the lunch break at 1130 hours, the workers again held a meeting inside the workshop and the Union leaders instigated them to rush out through the gates and attack the police party posted outside the workshop. At 1130 hours, the workers rushed out of the factory and pelted stones and chappals at the police party. The defiant mob had to be dispersed by resorting to lathi charge. A group of women rushed from the quarters and assaulted the police staff with broom sticks and stones. They were rounded up; they were not lathi charged. The workers and others showered stones on the police and when lathi-charge did not have the desired effect, the police had to burst tear-gas shells to disperse the mob. The situation was brought under control by 1200 hours. Thirty one men and eight women were arrested and cases are registered. One Sub-Inspector, one H.P.L., four Head Constables and thirteen police constables sustained injuries in stone throwing. Patrolling in the Railway colony has been arranged.

Protection has been arranged to loyal workers. It is reported that machinery of the workshop was not damaged during this trouble. Situation is now normal.

ಶ್ರೀ ಬಿ. ವಿ. ಕಕ್ಕಯ್ಯ.—ಅಲ್ಲಿ ಯಾವ ಒಂದು ಪ್ರೊಟೆಕ್ಷನ್ ಇಲ್ಲದಿದ್ದರೂ ಪೋಲೀಸಿನವರು ತಾವಾಗಿಯೇ ಅಲ್ಲಿ ನುಗ್ಗಿ ಅಲ್ಲಿದ್ದ ಹೆಂಗಸರು ಮಕ್ಕಳನ್ನು ಹೊಡೆದಿದ್ದಾರೆಂದು ನಮಗೆ ವರ್ತಮಾನ ಬಂದಿದೆ. ಆದುದರಿಂದ ಸರ್ಕಾರದವರು ಪೋಲೀಸಿನವರಿಗೆ ತಾವಾಗಿಯೇ ಹೋಗಿ ಏನು ಇಲ್ಲದ ಕಡೆ ಜನರಿಗೆ ಪ್ರಚೋದನೆ ಮಾಡತಕ್ಕ ರೀತಿಯಲ್ಲಿ ವರ್ತಿಸಬಾರದೆಂದು ಸೂಕ್ತ ತಿಳುವಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲಾ ಅಂಡ್ ಆರ್ಡರ್ ಮೈಂಟೇನ್ ಮಾಡುವಬಗ್ಗೆ ಮತ್ತು ಪ್ರಾಪರ್ಟಿ ರಕ್ಷಣೆಯ ಬಗ್ಗೆ ಅವರು ಏನು ಕ್ರಮಗಳನ್ನಾದರೂ ಕೈಗೊಳ್ಳಲಿ ಆ ಬಗ್ಗೆ ನಮ್ಮ ಆಕ್ಷೇಪಣೆಯಿಲ್ಲ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೋಲೀಸಿನವರು ತಾವಾಗಿಯೇ ನುಗ್ಗಿ ಅಲ್ಲಿ ಹಾಗೆ ಯಾರನ್ನೂ ಹೊಡೆಯುವುದಕ್ಕೆ ಹೋಗಿಲ್ಲ ಪರಕೆ ಇತ್ಯಾದಿಗಳನ್ನು ಹೆಗೆದುಕೊಂಡು ಪೋಲೀಸಿಗೆ ತೊಂದರೆ ಮಾಡಲು ಬಂದ ಜನರನ್ನು ಚದುರಿಸುವುದಕ್ಕೆ ಅವರು ವಿಧಿಯಿಲ್ಲದೆ ಲಾಠಿ ಛಾರ್ಜ್‌ನ್ನು ಮಾಡಬೇಕಾಯಿತು. ಅಷ್ಟೇ ಹೊರತು ಅವರಿಗೆ ಸೇಡುತೀರಿಸಿಕೊಳ್ಳಬೇಕೆಂಬ ಮನೋಪ್ರವೃತ್ತಿ ಇಲ್ಲಿ ಬೆಳೆಯುವುದಕ್ಕೆ ಅವಕಾಶವೇ ಇರುವುದಿಲ್ಲ.

MADAM SPEAKER.—I withhold my consent to both the notices of adjournment motions

Budget Estimates for 1974-75—Demands for grants Demand Nos: 5, 6 and 36

SRI N. HUTCHMASTHY GOWDA (Minister for Revenue).—On the recommendation of the Governor, Madam, I beg to move :

"That a sum not exceeding Rs. 5,86,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 5 "Land Revenue".

"That a sum not exceeding Rs. 73,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 6 "Stamp and Registration".

"That a sum not exceeding Rs. 1,20,17,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 36 "Other Social and Community Services".

MADAM SPEAKER.—Motion moved :

"That a sum not exceeding Rs. 5,86,00,000 inclusive of the sum granted 'on account' be granted to the Government to defray the charges which will come in course of payment during the